ಶ್ರೀ ಬಿ. ರಾಚಯ್ಯ.—ಮಾನ್ಯ ಸಭಾಧ್ಯಕ್ಷರೇ, ಉತ್ತರವನ್ನು ಸ್ವಲ್ಪ ಬದಲಾವಣೆ ಮಾಡಿದ್ದೇವೆ. ಏತಕ್ಕೆಂದರೆ, ಈ ಒಂದು ವಿಷಯ ನಗರಾಭಿವೃದ್ಧಿ ಮಂಡಲಿಯ ವ್ಯಾಪ್ತಿಗೆ ಬರತಕ್ಕಂಥದ್ದಾಗಿರುತ್ತದೆ. ಇದಕ್ಕೆ ಉತ್ತರ ಹೇಳುವಾಗ ಇಲ್ಲವೆಂದು ಹೇಳಿದ್ದಾರೆ. ಇದನ್ನು ತಿದ್ದುಪಡಿ ಮಾಡಿಕೊಂಡು ಉತ್ತರವನ್ನು ಹೇಳುತ್ತೇನೆ ದಯವಿಟ್ಟು ಕ್ಷಮಿಸಬೇಕು. ಇದಕ್ಕೆ ಉತ್ತರವಾಗಿ ಹುಬ್ಬಳ್ಳಿ ಮತ್ತು ಧಾರವಾಡದ ನಗರಸಭೆಯವರು ಶಿಲ್ಪಿಗಳನ್ನು ನೇಮಿಸಿ ಮುಂಗಡ ಹಣವನ್ನು ನೀಡಿದ್ದಾರೆಂದು ತಿಳಿದುಬಂದಿದೆ.

ಶ್ರೀ ಎಸ್.ಆರ್. ಮೋರೆ.—ವರಕವಿ ದಿವಂಗತ ಬೇಂದ್ರೆ ಅವರ ಕೃತಿಗಳನ್ನು ಆಳವಾಗಿ ಅಭ್ಯಸಿಸಲು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಒಂದು ಸಂಶೋಧನಾ ಮಂಡಲಿಯನ್ನು ಪ್ರಾರಂಭ ಮಾಡುವ ಪ್ರಶ್ನೆ ಇದೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಇದುವರೆಗೂ ಅಂತ ಪ್ರಶ್ನೆ ಬಂದಿಲ್ಲ. ಬಂದರೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಮಂಡಲಿಯನ್ನು ಪ್ರಾರಂಭಿಸಲು ಪರಿಶೀಲಿಸಲಾಗುತ್ತದೆ.

ಬಳ್ಳಾರಿ ಜಿಲ್ಲೆ ಶಿಕ್ಷಣ ಇಲಾಖೆ ನೌಕರರ ಪ್ರವಾಸಭತ್ಯೆ ಬಗ್ಗೆ

೨೨೧ ಶ್ರೀ ಚನ್ನಬಸವನಗೌಡ (ಕೂಡಲಗಿ) ಮಾನ್ಯ ವಿದ್ಯಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.

ಅ) ಬಳ್ಳಾರಿ ಜಿಲ್ಲೆಯ ಶಿಕ್ಷಣ ಇಲಾಖೆಯ ನೌಕರರ ರಜಾ ಸೌಲಭ್ಯ ಪ್ರವಾಸ ಭತ್ಯೆಯ ಅಂತಿಮ ಬಿಲ್ಲುಗಳು ಇದುವರೆಗೂ ಪಾಸಾಗದಿರುವುದಕ್ಕೆ ಕಾರಣಗಳೇನು,

ಆ) ಎಲ್ಲಾ ಇಲಾಖೆಯವರ ಬಿಲ್ಲುಗಳು ಪಾಸಾಗಿದ್ದು ಈ ಶಿಕ್ಷಣ ಇಲಾಖೆಯವರ ಬಿಲ್ಲುಗಳನ್ನು ತಡೆ ಹಿಡಿಯಲು ಕಾರಣಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಕೆಲವು ನೌಕರರ ರಜೆ ಸೌಲಭ್ಯದ ಪ್ರವಾಸದಲ್ಲಿ ಕೆಲವು ಅಕ್ರಮಗಳು ಕಂಡು ಬಂದಿದ್ದರಿಂದ ಆ ಬಿಲ್ಲುಗಳು ಇದುವರೆಗೂ ಪಾಸಾಗಿರುವುದಿಲ್ಲ.

ಆ) (ಅ) ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಚನ್ನಬಸವನಗೌಡರವರ (ಅ) ಪ್ರಶ್ನೆಯಲ್ಲಿ ಬಳ್ಳಾರಿ ಜಿಲ್ಲೆಯ ಶಿಕ್ಷಣ ಇಲಾಖೆಯ ನೌಕರರ ರಜಾ ಸೌಲಭ್ಯ ಪ್ರವಾಸ ಭತ್ಯೆಯ ಅಂತಿಮ ಬಿಲ್ಲುಗಳು ಇದುವರೆಗೂ ಪಾಸಾಗದಿರುವುದಕ್ಕೆ ಕಾರಣಗಳೇನು ಎಂಬುದಕ್ಕೆ ಉತ್ತರ ಕೆಲವು ನೌಕರರ ರಜೆ ಸೌಲಭ್ಯದ ಪ್ರವಾಸದಲ್ಲಿ ಕೆಲವು ಅಕ್ರಮಗಳು ಕಂಡು ಬಂದಿದ್ದರಿಂದ ಆ ಬಿಲ್ಲುಗಳು ಇದುವರೆಗೂ ಪಾಸಾಗಿರುವುದಿಲ್ಲವೆಂತಲೂ, (ಆ) ಪ್ರಶ್ನೆಯಲ್ಲಿ ಎಲ್ಲಾ ಇಲಾಖೆಯವರ ಬಿಲ್ಲುಗಳು ಪಾಸಾಗಿದ್ದು ಈ ಶಿಕ್ಷಣ ಇಲಾಖೆಯವರ ಬಿಲ್ಲುಗಳನ್ನು ತಡೆಹಿಡಿಯಲು ಕಾರಣಗಳೇನು ಎಂದು ಕೇಳಿರುವುದಕ್ಕೆ ಉತ್ತರವಾಗಿ (ಅ) ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲವೆಂದೂ ಉತ್ತರಿಸಲಾಗಿದೆ.

ಶ್ರೀ ಚನ್ನಬಸವನಗೌಡ.—ಅಕ್ರಮವೆಂದು ಹೇಳಿದಮೇಲೆ ಇನ್ನೂ ಸರಿಯಾದ ಕ್ರಮವನ್ನು ಏತಕ್ಕೆ ತೆಗೆದುಕೊಂಡಿಲ್ಲವೆಂದು ಕೇಳುತ್ತೇನೆ ?

ಶ್ರೀ ಬಿ. ರಾಚಯ್ಯ.—ಈ ಇಲಾಖೆಯಲ್ಲಿ ಇಂತಹ ೧೮೪೧ ಕೇಸ್‌ಗಳು ಇರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಅವು ಪ್ರತಿಯೊಂದನ್ನು ಕೂಡ ಕೂಲಂಕಶವಾಗಿ ಪರಿಶೀಲಿಸಬೇಕಾಗಿರುತ್ತದೆ. ಮತ್ತು ಅವರು ಪ್ರವಾಸ ಕೈಗೊಂಡಿರತಕ್ಕಂಥದ್ದು ಸಮ್ಮ ಸರ್ಕಾರಿ ಪ್ರವಾಸೋದ್ಯಮ ಇಲಾಖೆಯ ಲೈಸೆನ್ಸ್‌ಗೆ ಸಂಬಂಧಪಟ್ಟಿರಂತ್ತದೆಯೇ ಇಲ್ಲವೇ ಎನ್ನುವುದನ್ನೂ ಕೂಡ ಪರಿಶೀಲಿಸಬೇಕಾಗಿದೆ. ಇದನ್ನೆಲ್ಲಾ ಪರಿಶೀಲಿಸಿದ ನಂತರ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ ಮತ್ತೆ ಇದರಲ್ಲಿ ಎಲ್ಲವು ತಪ್ಪಿದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಂಗಮೇಶ್ವರ ಸರ್ವಾರ್.—ಮಾನ್ಯ ಅಧ್ಯಕ್ಷರೇ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಡಿ.ಡಿ.ಪಿ.ಐ.ರವರನ್ನು ಪೋಸ್ಟ್ ಮಾಡಿರುವುದಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ?

ಶ್ರೀ ಬಿ. ರಾಚಯ್ಯ.—ಬಹುಶಃ ಬಳ್ಳಾರಿ ಜಿಲ್ಲೆಗೆ ಈ ತಕ್ಷಣ ಡಿ.ಡಿ.ಪಿ.ಐನ್ನು ಹಾಕಂವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ಪ್ರವಾಸ ಮಾಡಿ ಅಕ್ರಮವಾಗಿ ಹಣವನ್ನು ಪಡೆದಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಎಷ್ಟು ದಿವಸಗಳು ಬೇಕಾಗುತ್ತದೆ. ಅದಕ್ಕೆ ನಾದರೂ ಟೈಮ್ ಚೌಂಡ್ ಇದೆಯೇ ? ಎರಡು ಮೂರು ವರ್ಷಗಳಿಂದಲೂ ಇದೇರೀತಿ ನಡೆಯುತ್ತಿದೆ.

ಶ್ರೀ ಬಿ ರಾಚಯ್ಯ. ಎರಡು ಮೂರು ವರ್ಷಗಳಿಂದಲೂ ಈ ರೀತಿಯಾದ ಅಕ್ರಮ ನಡೆಯುತ್ತಿದೆ ಎಂದಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದರೆ ಸ್ವಲ್ಪ ತಡವಾಗುತ್ತದೆ. ಏತಕ್ಕೆಂದರೆ, ಮೂಲಭೂತವಾಗಿ ಇಂಥ ವಿಚಾರಗಳನ್ನು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ಅವರು ರಾಜಕೀಯ ಮಾಡುತ್ತಿರುತ್ತಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ವಿಧಾನ ಸೌಧದಲ್ಲಿರುವವರ ಕೈಯಲ್ಲೂ ಕೂಡ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಡಿ.ಡಿ.ಪಿ.ಐ. ಮತ್ತು ಟೀಚರ್ಸ್ ಮೇಲೆ ನೀವು ಯಾವ ವಿಧವಾದ ಕ್ರಮವನ್ನಾದ್ರೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ಕ್ರಮ ತೆಗೆದುಕೊಳ್ಳುತ್ತೀರೆಂದು ನಾವು ನಂಬಿಕೆಯನ್ನು ಇಟ್ಟಿರುತ್ತೇವೆ.

ಶ್ರೀ ಬಿ. ರಾಚಯ್ಯ.—ಮೊದಲಿನಿಂದಲೂ ನಂಬಿಕೆಯನ್ನು ಇಟ್ಟುಕೊಂಡಿರುವಂತೆ ಈಗಲೂ ನಂಬಿಕೆಯನ್ನು ಇಟ್ಟುಕೊಳ್ಳಿ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳಲು ಹಿಂಜರಿಯುವುದಿಲ್ಲವೆಂದು ಹೇಳುತ್ತೇನೆ.

ಒಬ್ಬ ಸದಸ್ಯರು.—ಬಳ್ಳಾರಿಯ ಡಿ.ಡಿ.ಪಿ.ಐ. ಅವರ ಮೇಲೆ ಸಾಕಷ್ಟು ಕರಪ್ಷನ್ ಆಲೆಗೇಷನ್ ಬಂದಿರುತ್ತದೆ. ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ? ಇದರ ಬಗ್ಗೆ ರೆಸಲ್ಯೂಷನ್ ಮಾಡಿಯೂ ಕೂಡ ಕಳುಹಿಸಿರುತ್ತಾರೆ.

ಶ್ರೀ ಬಿ. ರಾಚಯ್ಯ.— ಹೊರಗಡೆ ಮಾತನಾಡುತ್ತಿದ್ದಾರೆಯೇ ವಿನಃ ಲಿಖಿತ ಮೂಲಕ ಇಂತಿಂದಾದ್ದು ಎಂದು ಈ ರೀತಿ ಮಾಡಿರಂತಾ ರೆಂದು ಯಾರೂ ಸರ್ಕಾರದ ಗಮನಕ್ಕೆ ತಂದಿಲ್ಲ. ಮತ್ತು ರೆಸಲ್ಯೂಷನ್ ಮಾಡಿರತಕ್ಕಂಥದ್ದೂ ಕೂಡ ಯಾರಮೇಲೂ ಬಂದಿರುವುದಿಲ್ಲ.

ಶ್ರೀ ಎಂ. ರಾಮಪ್ಪ.—ನಾವೇ ಬರೆದುಕೊಟ್ಟಿದ್ದೇವೆ.

ಶ್ರೀ ಬಿ. ರಾಚಯ್ಯ.—ಡಿ. ಸಿ. ಸಿ. ಮೀಟಿಂಗ್‌ನಲ್ಲಿ ಈ ಬಗ್ಗೆ ನಿರ್ಣಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಈ ಬಗ್ಗೆ ಬರೆದುಕೊಟ್ಟರೆ ನಾವು ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಕೆ. ಚನ್ನಬಸವನಗೌಡ.—ಈಗ ಸರ್ಕಾರದ ಮುಂದೆ ೧೮೪೧ ಬಿಲ್ಲುಗಳು ಇವೆ ಎಂದು ಹೇಳಿ ದ್ದೀರಿ. ಇವುಗಳಲ್ಲಿ ಅಕ್ರಮವಾಗಿರುವುದನ್ನು ಬಿಟ್ಟು ಉಳಿದ ಬಿಲ್ಲುಗಳನ್ನು ಏತಕ್ಕೆ ಮಂಜೂರು ಮಾಡಬಾರದು ?

ಶ್ರೀ ಬಿ. ರಾಚಯ್ಯ.—ಇವೆಲ್ಲಾ ಈಗ ಕಮೀಷನರ್ ಫಾರ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಮಟ್ಟದಲ್ಲಿ ತನಿಖೆಯಾಗುತ್ತಿದೆ. ಈ ಬಿಲ್ಲುಗಳನ್ನು ಜಾಗ್ರತೆ ತನಿಖೆ ಮಾಡಿ ಯಾರು ಯಾರು ತಪ್ಪಿತಸ್ಥರಲ್ಲ ಅಂತಹವರ ಬಿಲ್‌ಗಳನ್ನು ಕೂಡಲೇ ಮುಂಜೂರು ಮಾಡುವುದಕ್ಕೆ ನಾನು ನಿರ್ದೇಶನ ಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ರಾಯಚೂರಿಗೆ ಒಬ್ಬರು ಡಿ.ಡಿ.ಪಿ.ಐ. ಅನ್ನು ಯಾವಾಗ ನೇಮಕ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ —ತಾವು ಇಲ್ಲಿಂದ ಹೋಗುವುದರೊಳಗಾಗಿ ಅಲ್ಲಿಗೆ ಒಬ್ಬರು ಡಿ.ಡಿ.ಪಿ.ಐ. ಅನ್ನು ನೇಮಕ ಮಾಡಿರುತ್ತೇವೆ.

ಉಪಾಧ್ಯಕ್ಷರು.—೯೦ನೇ ಪ್ರಶ್ನೆ ಕೇಳಲು ಶ್ರೀ ವಿ.ಎಸ್. ಆಚಾರ್ಯ ಅವರು ಸಭೆಯಲ್ಲಿ ಇಲ್ಲ. ಪ್ರಶ್ನೆ ೯೨ ಮತ್ತು ಪ್ರಶ್ನೆ ೯೮ ರ ಬಗ್ಗೆ ಮಾನ್ಯ ಮಂತ್ರಿಗಳು ನನಗೆ ಕಾಗದ ಬರೆದು ಪೂರ್ಣವಾದಂತಹ ಮಾಹಿತಿಗಳನ್ನು ಇನ್ನು ಕಲೆಕ್ಟ್ ಮಾಡುತ್ತಿರುವುದಾಗಿ ತಿಳಿಸಿದ್ದಾರೆ. ಆದ್ದರಿಂದ ಇವುಗಳನ್ನು ಕ್ಯಾರಿ ಓವರ್ ಮಾಡಿದ್ದೇನೆ.